ಗುರುವಾರ, 12 ಜನವರಿ 2017 | ಪುಟಗಳು: 14+4+4 | ಬೆಲೆ: ₹ 4.00
www.vijaykarnataka.com
ಸಂಪುಟ: 16 | ಸಂಚಿಕೆ: 167
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
PRIDE



ಹಮ್ಮಾ ಹಮ್ಮಾ ಹಾಡಿನಲ್ಲಿ ಶ್ರದ್ಧಾ ಕಪೂರ್ ಕಣ್ಣಿಗೆ ಹಾಟ್ ಆಗಿ ಕಂಡ ಆದಿತ್ಯ ಕಪೂರ್



ರಾಜ್ಯಗಳ ಭಿನ್ನಾಭಿಪ್ರಾಯ ಶೀಘ್ರ ನಿವಾರಣೆ, ಏ.1ರಿಂದಲೇ ಜಿಎಸ್‌ಟಿ ಜಾರಿ: ಜೇಟ್ಲಿ ಆಶಾವಾದ P10

ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮಕ್ಕೆ ಸಾಂಸ್ಕೃತಿ… ರಾಯಭಾರಿಯಾಗಿ ಕರಣ್ ಜೋಹರ್‌ಗೆ ಆಹ್ವಾ…

# ಎಂಜಿನಿಯರಿಂಗ್ ಪ್ರವೇಶಕ್ಕೂ ನೀಟ್ ಮಾದರಿಯ ಪರೀಕ್ಷೆ

**ಹೊಸದಿಲ್ಲಿ:** ಎಂಜಿನಿಯರಿಂಗ್ ಕಾಲೇಜು ಗಳಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ದೇಶಾದ್ಯಂತ ಏಕ ರೂಪದ ಪ್ರವೇಶ ಪರೀಕ್ಷೆ ಜಾರಿಗೆ ತರುವ ಬಗ್ಗೆ ಕೇಂದ್ರ ಸರಕಾರ ಚಿಂತನೆ ನಡೆಸಿದೆ. ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಈಗಾಗಲೇ ಜಾರಿಗೆ ಬಂದಿರುವ 'ನೀಟ್' ಮಾದರಿ ಯಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಗಳಿಗೂ ಒಂದೇ ಬಗೆಯ ಪ್ರವೇಶ ಪರೀಕ್ಷೆ ಜಾರಿಗೆ ತರಲಿದ್ದು, ಈ ಸಂಬಂಧ ರಾಜ್ಯ ಗಳೊಂದಿಗೆ ಸಮಾಲೋಚನೆ ನಡೆಸುತ್ತಿದೆ.

ದೇಶದಲ್ಲಿ ಸಾವಿರಾರು ಸರಕಾರಿ , ಖಾಸಗಿ ಎಂಜಿನಿಯರಿಂಗ್ ಕಾಲೇಜು ಗಳಿವೆ. ಇವುಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆಯಾ ರಾಜ್ಯಗಳ ನಿಯಮಾವಳಿಗಳ ಅನುಸಾರ ಹಲವು ಬಗೆಯ ಪ್ರವೇಶ ಪರೀಕ್ಷೆಗಳನ್ನು ಎದು ರಿಸುವ ಅನಿವಾರ್ಯತೆ ಇದೆ. ವಿದ್ಯಾರ್ಥಿ ಗಳ ಮೇಲಿನ ಈ ಹೊರೆ ತಪ್ಪಿಸುವುದು ಸರಕಾರದ ಉದ್ದೇಶವಾಗಿದೆ.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೂ ಒಂದೇ ಬಗೆಯ ಪ್ರವೇಶ ಪರೀಕ್ಷೆ ಜಾರಿಗೊಳಿಸುವ ಕುರಿತು ಬುಧವಾರ ದಿಲ್ಲಿಯಲ್ಲಿ ನಡೆದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಉನ್ನತ ಮಟ್ಟದ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ. ವಿದ್ಯಾರ್ಥಿಗಳ ಹೊರೆ ತಗ್ಗಿಸುವುದರ ಜತೆಗೆ ಪ್ರವೇಶ ವಿಧಾನದಲ್ಲಿ ನಡೆಯುವ ಅಕ್ರಮ ತಡೆ ಗಟ್ಟುವುದು ಹಾಗೂ ಪಾರದರ್ಶಕತೆ ತರುವುದು ಪ್ರಸ್ತಾವನೆಯ ಉದ್ದೇಶ ವಾಗಿದೆ ಎಂದು ಮೂಲಗಳು ತಿಳಿಸಿವೆ.